ಸ್ಥಾಪನೆ : 15.04.1979 ದೂರವಾಣಿ : 2661 1141

# ಸರ್ ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ : ನಂ. 109, ಶಂಕರಮಠದ ರಸ್ತೆ, ಶಂಕರಪುರಂ, ಬೆಂಗಳೂರು-560 004

## 40ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರೇ,

ಸರ್ ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ 40ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 09-09-2018ನೇ ಭಾನುವಾರದಂದು ಬೆಳಗ್ಗೆ 10.00 ಕ್ಕೆ ಸರಿಯಾಗಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳುವ ಸಲುವಾಗಿ ಕರೆಯಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಬೇಕಾಗಿ ವಿನಂತಿ.

**ಅಧ್ಯಕ್ಷತೆ : ಶ್ರೀ ಕೆ.ಎನ್. ವೆಂಕಟನಾರಾಯಣ, ಬ್ಯಾಂಕಿನ ಅಧ್ಯಕ್ಷರು.**

**ಸ್ಥಳ: ವಿದ್ಯಾ ವಿಹಾರ, ಶ್ರೀ ಚಂದ್ರಶೇಖರಭಾರತಿ ಕಲ್ಯಾಣ ಮಂಟಪದ ಆವರಣ,**
ಪಂಪಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು-560 004.

## ವಿಷಯಗಳು

| ಕ್ರ. ಸಂ. | ವಿಷಯ | ವರದಿ ಪುಟ ಸಂಖ್ಯೆ |
|---|---|---|
| 1. | ಪ್ರಾರ್ಥನೆ. | — |
| 2. | ಸ್ವಾಗತ ಭಾಷಣ. | — |
| 3. | ವರದಿ ಸಾಲಿನಲ್ಲಿ ದೈವಾಧೀನರಾದ ಸದಸ್ಯರ ಆತ್ಮಕ್ಕೆ ಶಾಂತಿ ಕೋರಿ ಸಂತಾಪ ಸೂಚಿಸುವುದು. | — |
| 4. | 40ನೇ ಸಾಮಾನ್ಯ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲಿಸುವುದು. | 9 |
| 5. | ದಿನಾಂಕ 20.08.2017ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಯನ್ನು ಓದುವುದು ಮತ್ತು ದೃಢೀಕರಿಸುವುದು. | — |
| 6. | ಆಡಳಿತ ಮಂಡಲಿಯು ಮಂಡಿಸಿದ 2017-18ನೇ ಸಾಲಿನ ವಾರ್ಷಿಕ ವರದಿಯ ಪರಿಗಣನೆ. | 15 |
| 7. | 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಲೆಕ್ಕಪರಿಶೋಧಿತ ಆಸ್ತಿ ಹೊಣೆ ಪಟ್ಟಿ, ಲಾಭ-ನಷ್ಟ ತ:ಖ್ತೆ ಮತ್ತು ಇತರ ಆರ್ಥಿಕ ತ:ಖ್ತೆಗಳ ಪರಿಗಣನೆ ಹಾಗೂ ಅದರ ಬಗ್ಗೆ ಆಡಳಿತ ಮಂಡಲಿಯು ತೆಗೆದುಕೊಂಡ ಕ್ರಮಗಳ ಪರಿಗಣನೆ. | — |
| 8. | 2017-18ನೇ ಸಾಲಿನ ಆಯವ್ಯಯ ಅನುದಾನಗಳಲ್ಲಿನ ಹೆಚ್ಚುವರಿ ಖರ್ಚುಗಳಿದ್ದಲ್ಲಿ ಅಂಥ ಖರ್ಚುಗಳ ಅನುಮೋದನೆ ಮತ್ತು 2018-19ನೇ ಸಾಲಿನ ಆಯವ್ಯಯ ಅಂದಾಜುಗಳ ಮತ್ತು 2019-20ನೇ ಸಾಲಿನ ಆಯವ್ಯಯ (ತಾತ್ಕಾಲಿಕ) ಅಂದಾಜುಗಳ ಅನುಮೋದನೆ. | 28 |

| ಕ್ರ. ಸಂ. | ವಿಷಯ | ವರದಿ ಪುಟ ಸಂಖ್ಯೆ |
|---|---|---|
| 9. | ನಿಯಮಾನುಸಾರ **2017-18ನೇ ಸಾಲಿನ ನಿವ್ವಳ ಲಾಭದ ವಿನಿಯೋಗ ಮತ್ತು ಲಾಭಾಂಶ ಪ್ರಮಾಣದ ಅನುಮೋದನೆ.** | **35** |
| 10. | **ಉಪವಿಧಿಗಳ ತಿದ್ದುಪಡಿ ಮತ್ತು ಅನುಮೋದನೆ.** | **36** |
| 11. | ವಸೂಲಾಗದ್ದೆಂದು ಪರಿಗಣಿಸಲಾದಂತಹ ಯೋಗ್ಯ ಪ್ರಕರಣಗಳಲ್ಲಿ **ಹೋಕುಬಾಕಿ (ಬ್ಯಾಡ್‌ಡೆಟ್ಸ್) ಸಾಲಗಳ ಬಗ್ಗೆ ನಿರ್ಧರಿಸುವುದು.** | **36** |
| 12. | **2017-18ನೇ ಸಾಲಿನಲ್ಲಿ ಬ್ಯಾಂಕಿಗೆ ಸೇರಿಸಿಕೊಂಡ ಹಾಗೂ ಸಮಾಪನೆಯಾದ ಸದಸ್ಯರ** ಪಟ್ಟಿಯ ಪರಿಶೀಲನೆ. | **36** |
| 13. | **2018-19ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ ಮತ್ತು ಅವರಿಗೆ ಕೊಡಬಹುದಾದ ಸಂಭಾವನೆಯ ನಿರ್ಧರಣೆ** ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಪರ್ಯಾಯ ವ್ಯವಸ್ಥೆ. | **37** |
| 14. | **ಮೀಸಲು ನಿಧಿ ಮತ್ತು ಇತರೆ ನಿಧಿಗಳ ವಾಸ್ತವಿಕ** ಬಳಕೆಯ ವಿಮರ್ಶೆ. | **37** |
| 15. | **ಕಟ್ಟಡ ನಿರ್ಮಾಣ ಬಗ್ಗೆ ವಿವರ.** | **37** |
| 16. | **ನಿರ್ಣಯಗಳನ್ನು ಅಂಗೀಕರಿಸುವುದು.** | **38** |
| 17. | ಸೂಕ್ತ ಮುನ್ಸೂಚನೆ ಮೇರೆಗೆ ತರಬಹುದಾದ ಇತರೆ ವಿಷಯಗಳು. | — |
| 18. | ಸಭಾಪತಿಯವರ ಅಪ್ಪಣೆ ಮೇರೆಗೆ ಇತರೆ ವಿಷಯಗಳು. | — |
| 19. | ವಂದನಾರ್ಪಣೆ. | — |

ನಿರ್ದೇಶಕ ಮಂಡಲಿಯ ಅಪ್ಪಣೆ ಮೇರೆಗೆ

ಸಹಿ/-
**ಟಿ.ಎಸ್. ಗುರುಪ್ರಸಾದ್**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 30-06-2018

## ವಿಶೇಷ ಸೂಚನೆ

ಈ ಕೆಳಕಂಡ ವಿಷಯಗಳನ್ನು ಕುರಿತಾದ ವಿವರವಾದ ಮಾಹಿತಿಗಳನ್ನು ಒಳಗೊಂಡ **ಮುದ್ರಿತ ಪ್ರತಿಗಳು ಬ್ಯಾಂಕಿನ ಪ್ರಧಾನ ಕಛೇರಿ ಹಾಗೂ ಎಲ್ಲಾ ಶಾಖೆಗಳಲ್ಲಿ ದಿನಾಂಕ 04-09-2018 ರಿಂದ ಸದಸ್ಯರಿಗೆ ಲಭ್ಯವಿರುತ್ತದೆ.**

**1. ದಿನಾಂಕ 20-08-2017ರಂದು ನಡೆದ ಸಾಮಾನ್ಯ ಸಭೆಯ ನಡವಳಿಯ ಪ್ರತಿ.**

**2. 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಅನುಪಾಲನಾ ವರದಿ ಹಾಗೂ ಆರ್ಥಿಕ ತಃಖ್ತೆಗಳು.**

Estd: 15.04.1979 Phone : 2661 1141

# SIR M.VISVESVARAYA CO-OPERATIVE BANK LTD.,

**CORPORATE OFFICE :** No.109, Shankaramutt Road, Shankarapuram, Bangalore-560 004

## NOTICE OF 40TH ANNUAL GENERAL MEETING

Notice is hereby given to **all the Members of the Bank that the 40th Annual General Meeting of Sir M. Visvesvaraya Co-operative Bank Limited is scheduled to be held on Sunday, 09-09-2018 at 10.00 a.m. at Vidya Vihar, Sri Chandrashekhara Bharathi Kalyana Mantapa Premises, Pampamahakavi Road, Shankarpuram, Bangalore-560 004** to consider the following agenda. All the Members are requested to be present.

**Sri K.N. Venkatanarayana,** President of the Bank will preside over the meeting.

## AGENDA

| Sl. No | Subject | Page No. |
|---|---|---|
| 1. | Invocation. | —— |
| 2. | Welcome Speech. | —— |
| 3. | To express **condolence to the deceased Members,** who passed away during 2017-18 | —— |
| 4. | **Reading and recording the 40th Annual General Meeting Notice.** | 9 |
| 5. | Reading and confirming the **Proceedings of the previous Annual General Meeting held on 20-08-2017.** | —— |
| 6. | Consideration of the **Annual Report for the year 2017-18 as presented by the Board.** | 15 |
| 7. | **Consideration of the Audit Report for the year 2017-18, Audited Balance Sheet, Profit and Loss Account and other financial statements** and the action taken by the Board thereon. | —— |
| 8. | **Approval of the Excess Expenditure if any of the Budget estimates of the year 2017-18 and Approval of the Budget estimates for the year 2018-19 and 2019-20 (Tentative).** | 28 |

| Sl. No | Subject | Page No. |
|---|---|---|
| 9. | **Approval for appropriation of Profit as per the rules and declaration of the dividend for the year 2017-18.** | 35 |
| 10. | **Approval for amendments to bye-laws .** | 36 |
| 11. | **Decision on Bad Debts** considered as irrecoverable in eligible cases. | 36 |
| 12. | Review of the note on the **Admission and Termination of Members during the preceding year 2017-18.** | 36 |
| 13. | **Appointment of the Auditor and fixation of the remuneration payable to him for the year 2018-19** and alternative arrangements under unavoidable circumstances. | 37 |
| 14. | Review of the **actual utilization of the Reserve and other Funds.** | 37 |
| 15. | **Details about construction of buildings.** | 37 |
| 16. | **To consider passing of Resolutions.** | 38 |
| 17. | **Any other matter with sufficient prior notice.** | — |
| 18. | **Any other Subjects with the permission of the Chairperson.** | — |
| 19. | **Vote of thanks** | — |


By order of the Board of Management
Sd/-

Place : Bangalore
Date : 30-06-2018

**T.S. GURUPRASAD**
Chief Executive Officer

## Special Notice :

**The two Printed Book-lets** giving detailed information about the following will be made available to the Members **from 04-09-2018 at Corporate Office, as well as at all Branches of our Bank.**

1. **Minutes of the Annual General Meeting held on 20-08-2017.**
2. **Audit Report along with compliance and Statement of Accounts for the year 2017-18.**

# ಸದಸ್ಯರ ಗಮನಕ್ಕೆ

1. ನಮ್ಮ ಬ್ಯಾಂಕಿನ ವತಿಯಿಂದ **ಗುರುತಿನ ಚೀಟಿಯನ್ನು ಪಡೆಯುವುದು ಮತ್ತು ವಾರ್ಷಿಕ ಸಾಮಾನ್ಯ ಸಭಾ ಪ್ರವೇಶಕ್ಕೆ ಹಾಜರುಪಡಿಸುವುದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯನ್ವಯ ಕಡ್ಡಾಯವಾಗಿರುತ್ತದೆ. ಗುರುತಿನ ಚೀಟಿಯನ್ನು ಇದುವರೆವಿಗೂ ಪಡೆಯದೆ ಇರುವಂತಹ ಸದಸ್ಯರು ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಪ್ರಧಾನ ಕಚೇರಿಗೆ ನೀಡಿ ಗುರುತಿನ ಚೀಟಿಯನ್ನು ಪಡೆಯಬೇಕಾಗಿ ವಿನಂತಿ. ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯನ್ನು ಹೊರತುಪಡಿಸಿ ಬೇರೆ ಯಾವುದೇ ರೀತಿಯ ಗುರುತಿನ ಚೀಟಿಗಳನ್ನು ಸಭಾ ಪ್ರವೇಶಕ್ಕೆ ಮಾನ್ಯ ಮಾಡಲಾಗುವುದಿಲ್ಲ.** ಉದಾ: ಆಧಾರ್ ಕಾರ್ಡ್, ಎಂಸಿಸಿ ಕಾರ್ಡ್, ಪ್ಯಾನ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಮುಂತಾದ ಚೀಟಿಗಳು.

2. **ಎಲ್ಲಾ ಸದಸ್ಯರು ತಪ್ಪದೆ ಹಾಜರಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ ಪ್ರಾರ್ಥನೆ ಮತ್ತು ಸದಸ್ಯರಲ್ಲದವರನ್ನು ಸಭೆಗೆ ದಯಮಾಡಿ ಕರೆತರಬಾರದಾಗಿ ಕೋರುತ್ತೇವೆ.**

3. **2013–14ರ ನಂತರ ಡಿವಿಡೆಂಡ್ ಪಡೆಯದೇ ಇರುವಂತಹ ಸದಸ್ಯರು ಕೂಡಲೇ ಪ್ರಧಾನ ಕಛೇರಿಯನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.** ತಾವು ಉಳಿತಾಯ ಖಾತೆಯನ್ನು ಇದುವರೆವಿಗೂ ತೆರೆಯದೆ ಇದ್ದಲ್ಲಿ ತಮಗೆ ಅನುಕೂಲವಿರುವ ಬ್ಯಾಂಕಿನ ಯಾವುದೇ ಶಾಖೆಯಲ್ಲಿ **ಕೂಡಲೇ ಉಳಿತಾಯ ಖಾತೆಯನ್ನು ತೆರೆದು ಅದರ ಸಂಖ್ಯೆಯನ್ನು ಪ್ರಧಾನ ಕಛೇರಿಗೆ ನೀಡಿದಲ್ಲಿ ಡಿವಿಡೆಂಡ್ ಹಣವನ್ನು ವರ್ಗಾಯಿಸಲಾಗುವುದು.**

4. ಸದಸ್ಯರು ನೀಡಲಾಗಿರುವ ವಿಳಾಸಕ್ಕೆ ಸಭೆಯ ಸೂಚನಾ ಪತ್ರವನ್ನು ಸಕಾಲದಲ್ಲಿ ಅಂಚೆಯ ಮೂಲಕ ಕಳುಹಿಸ ಲಾಗುತ್ತಿದೆ. ಆದರೂ ವಿಳಾಸ ಬದಲಾವಣೆಯ ಕಾರಣದಿಂದಾಗಿ ಅನೇಕ ಸೂಚನಾ ಪತ್ರ/ವಾರ್ಷಿಕ ವರದಿ ವಿತರಣೆಯಾಗದೆ ಹಿಂದಿರುಗಿರುತ್ತವೆ. ಆದ್ದರಿಂದ **ದಯಮಾಡಿ ತಮ್ಮ ವಿಳಾಸ ಬದಲಾವಣೆಯಾಗಿದ್ದಲ್ಲಿ ತಪ್ಪದೆ ಬದಲಾಗಿರುವ ವಿಳಾಸವನ್ನು ಪ್ರಧಾನ ಕಛೇರಿಗೆ ನೀಡಬೇಕಾಗಿ ವಿನಂತಿ.**

5. ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳೇನಾದರೂ ಇದ್ದಲ್ಲಿ ಅಂತಹ ವಿಷಯಗಳನ್ನು ಸಭೆಯ ದಿನಾಂಕಕ್ಕೆ **ಮೂರು ದಿನಗಳ ಮುಂಚಿತವಾಗಿ ಮುಖ್ಯ ಕಾರ್ಯನಿರ್ವಾಹಕರಿಗೆ ಲಿಖಿತ ರೂಪದಲ್ಲಿ ತಲುಪಿಸಬೇಕಾಗಿ ವಿನಂತಿ. ನಂತರ ಬರುವ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.**

6. **ಸದಸ್ಯರಿಗೆ ಬೆಳಗ್ಗೆ 09.30 ಗಂಟೆಯಿಂದ ಲಘು ಉಪಹಾರ ಮತ್ತು 11.30 ಗಂಟೆಯಿಂದ ಊಟದ ವ್ಯವಸ್ಥೆ ಏರ್ಪಡಿಸಲಾಗಿದೆ.**

7. **ವಾರ್ಷಿಕ ಸಾಮಾನ್ಯ ಸಭೆಯ ಹಿಂದಿನ ದಿವಸ ಅಂದರೆ ದಿನಾಂಕ 08.09.2018ನೇ ಶನಿವಾರದಂದು ಸಾಯಂಕಾಲ 6.00 ಗಂಟೆಯಿಂದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಏರ್ಪಡಿಸಲಾಗಿದೆ.**

8. **ಸದಸ್ಯರ ವಾಹನ ನಿಲುಗಡೆಗೆ ಶ್ರೀ ರಾಯ ರಾಯ ಕಲ್ಯಾಣ ಮಂಟಪಕ್ಕೆ ಸೇರಿದ ಆವರಣದಲ್ಲಿ** (ಅಂದರೆ ಶ್ರೀ ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪದ ಆವರಣದ ಎದುರು ಇರುವ ಖಾಲಿ ಜಾಗದಲ್ಲಿ) ವ್ಯವಸ್ಥೆ ಮಾಡಲಾಗಿದೆ.

9. ಮಾನ್ಯ ಸದಸ್ಯರು ತಮ್ಮ ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ವಿಳಾಸವನ್ನು ಇದುವರೆವಗೂ ಬ್ಯಾಂಕಿನಲ್ಲಿ ನೋಂದಾಯಿಸದೇ ಇದ್ದ ಪಕ್ಷದಲ್ಲಿ ದಯಮಾಡಿ ನೋಂದಾಯಿಸಿಕೊಳ್ಳುವುದು. **ಇದರಿಂದ ಎಸ್‌ಎಂಎಸ್/ ಇ–ಮೇಲ್ ಕಳುಹಿಸಲು ಅಥವಾ ಇತರೆ ಬ್ಯಾಂಕಿನ ವಿಷಯಗಳನ್ನು ಕಳುಹಿಸಲು ಸಹಾಯಕವಾಗಿ ಅನವಶ್ಯಕ ವಿಳಂಬ ವನ್ನು ತಪ್ಪಿಸಬಹುದು.**

ನಿರ್ದೇಶಕ ಮಂಡಲಿಯ ಅಪ್ಪಣೆ ಮೇರೆಗೆ
**ಸಹಿ/–**
**ಟಿ.ಎಸ್. ಗುರುಪ್ರಸಾದ್**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 30–06–2018

# MEMBERS TO NOTE

1. As per the Karnataka Co-operative Societies Act, **Members should obtain an Identity Card (ID) issued by the Bank and produce compulsorily for entry into Annual General Meeting. Members are therefore, requested to bring the IDENTITY CARD issued by the Bank without fail. If a member has not taken the ID card so far, such member is requested to produce two passport size photographs and obtain the ID card from Corporate Office. Also, please note that other I.D. cards like M.C. Card, Aadhar Card, PAN etc., will not be allowed**.
2. Members are requested to **sign the Attendance Register compulsorily and also not to bring non members to the meeting.**
3. **Members, who have not collected the dividend for 2013-14 onwards, may contact our Corporate Office immediately.** Those who have not yet opened S.B.Account with any of our Branches may do so immediately and **intimate the account number to Corporate Office in order to enable us to transfer the dividend.**
4. We have been sending Meeting Notice and Annual Report to the addresses already provided. But a large number of such notices/reports dispatched by us are being returned undelivered for the reason of change in address. **Hence, we request all the Members to provide change in their addresses.**
5. Subjects to be discussed at the Annual General Meeting should be sent to **the Chief Executive Officer in writing at least three days before the Annual General Meeting.** Subjects received later, will not be considered.
6. **Breakfast at 09.30 a.m. and lunch at 11.30 a.m. onwards is arranged for Members.**
7. **Please note that Prathibha Puraskara function has been arranged on previous day, i.e, on Saturday, the 8th Sept. 2018 at 6.00 P.M.**
8. **Vehicle parking facility is provided for vehicles on the date of General Body at the vacant space belonging to Sri Raya Raya Choultry premises** which is opposite to Sri Chandrasekhara Bharathi Kalyana Mantapa.
9. Members are requested to register their mobile numbers e-mail addresses in case the same is not done so far. This will help us in sending SMS / e-mail correspondence, avoiding delay in communicating the Bank matters.

By the order of the Board of Management,

**Sd/-**

Place : Bangalore
Date : 30.06.2018

**T.S. GURUPRASAD**
Chief Executive Officer

# ಸರ್ ಎಂ. ವಿಶ್ವೇಶ್ವರಯ್ಯ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ : 109, ಶಂಕರಮಠದ ರಸ್ತೆ, ಶಂಕರಪುರಂ, ಬೆಂಗಳೂರು–560 004

## 2017–18ನೇ ಸಾಲಿನ ಆಡಳಿತ ಮಂಡಲಿಯ ವರದಿ

ಸನ್ಮಾನ್ಯ ಸದಸ್ಯರೇ,

**ನಿಮ್ಮ ಬ್ಯಾಂಕಿನ 40ನೇ ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಲು ಆಡಳಿತ ಮಂಡಲಿಯು ಹರ್ಷಿಸುತ್ತದೆ ಹಾಗೂ 2017–18ನೇ ಸಾಲಿನ ಅಂತ್ಯಕ್ಕೆ ಆಡಳಿತ ಮಂಡಲಿಯ ವರದಿ ಹಾಗೂ ಪರಿಶೋಧಿತ ಲೆಕ್ಕಪತ್ರಗಳನ್ನು ತಮ್ಮ ಮುಂದೆ ಮಂಡಿಸಲಾಗಿದೆ.**

**2017–18ನೇ ಸಾಲಿನಲ್ಲಿ ನಿಮ್ಮ ಬ್ಯಾಂಕು ಪ್ರಗತಿಯನ್ನು ಸಾಧಿಸಿದೆ ಎಂದು ತಿಳಿಸಲು ಆಡಳಿತ ಮಂಡಲಿಯು ಹರ್ಷಿಸುತ್ತದೆ.**

2016–17ನೇ ಸಾಲಿನಲ್ಲಿ ತಮಗೆ ತಿಳಿದಿರುವಂತೆ ನಮ್ಮ ದೇಶದ ಆರ್ಥಿಕ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾಗಿವೆ. ನೋಟಿನ ಅಮಾನೀಕರಣ ಮತ್ತು ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೊಳಿಸಿದ್ದರಿಂದ ಹಲವಾರು ವ್ಯಾಪಾರ ವಹಿವಾಟುಗಳು, ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಪ್ರಗತಿಯಲ್ಲಿ ಅದರಲ್ಲೂ ಸಹ **ರಿಯಲ್ ಎಸ್ಟೇಟ್, ಕಟ್ಟಡ ಕಾಮಗಾರಿ, ವ್ಯಾಪಾರ, ಗೃಹ ನಿರ್ಮಾಣ ಇನ್ನೂ ಮುಂತಾದ ಉದ್ಯಮಗಳಲ್ಲಿ ಪ್ರಗತಿಯು ಕುಂಠಿತಗೊಂಡಿದೆ. ಇದರ ಪರಿಣಾಮವು ಬ್ಯಾಂಕಿಂಗ್ ಕ್ಷೇತ್ರದ ಮೇಲೂ ಸಹ ಆಗಿದ್ದು, ಎಲ್ಲಾ ಬ್ಯಾಂಕುಗಳು ಹಣಕಾಸಿನ ಮುಗ್ಗಟ್ಟನ್ನು ಎದುರಿಸಬೇಕಾಯಿತು.** ಇದಲ್ಲದೆ ಸಾಲ ಮರುಪಾವತಿಯಲ್ಲಿ ಅತೀವ ಹಿನ್ನಡೆ ಉಂಟಾಗಿ ಬ್ಯಾಂಕುಗಳ ಅನುತ್ಪಾದಕ ಆಸ್ತಿಯು ಹೆಚ್ಚಾಗುತ್ತಾ ಹೋಗಿರುತ್ತದೆ. **ಭಾರತೀಯ ರಿಸರ್ವ್ ಬ್ಯಾಂಕು ಅನುತ್ಪಾದಕ ಆಸ್ತಿಯ ವಸೂಲಾತಿ ಬಗ್ಗೆ ತೀವ್ರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದ್ದು, ಅದಕ್ಕೆ ಪೂರಕವಾಗಿ ಲಾಭದಲ್ಲಿ ಮೀಸಲಿರಿಸಲು ನಿರ್ದೇಶಿಸಿದೆ. ಇದರ ಪರಿಣಾಮವಾಗಿ ಬ್ಯಾಂಕುಗಳು ಗಳಿಸಿದ ಲಾಭದಲ್ಲಿ ಅನುತ್ಪಾದಕ ಆಸ್ತಿಗೆ ಮೀಸಲಿರಿಸಬೇಕಾಗುತ್ತದೆ.** ಇದರಿಂದ ಹಲವಾರು ರಾಷ್ಟ್ರೀಕೃತ ಬ್ಯಾಂಕುಗಳು ವರದಿ ಸಾಲಿನಲ್ಲಿ ನಷ್ಟವನ್ನು ಅನುಭವಿಸಿದವು. 2017–18ನೇ ಸಾಲಿನಲ್ಲಿ ಬ್ಯಾಂಕುಗಳಿಗೆ ಒಟ್ಟು ರೂ.87,000 ಕೋಟಿಗಳಷ್ಟು ನಷ್ಟವುಂಟಾಗಿದ್ದು, ಲಾಭಗಳಿಸಿರುವ ಬ್ಯಾಂಕುಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ ಇರುತ್ತವೆ. ಇದರಿಂದ ಬ್ಯಾಂಕುಗಳು ಗಳಿಸಿದ ಲಾಭದಲ್ಲಿ ಹೆಚ್ಚಿನ ಮೊತ್ತವನ್ನು ಅನುತ್ಪಾದಕ ಆಸ್ತಿಗಳಿಗೆ ಮೀಸಲಿರಿಸಬೇಕಾಯಿತು. ವಸೂಲಾಗದ ಸಾಲಗಳ ಬಗ್ಗೆ ಬ್ಯಾಂಕುಗಳು ಕಠಿಣ ಕ್ರಮ ಕೈಗೊಳ್ಳಲು ತಿಳಿಸಿದ್ದು, ದಿವಾಳಿ ಪ್ರಕ್ರಿಯೆ ಕಾನೂನನ್ನು ಬಳಸಿ ವಸೂಲಾತಿಗೆ ಕ್ರಮ ಕೈಗೊಳ್ಳಲು ನಿರ್ದೇಶಿಸಿರುತ್ತದೆ. ಸಾಲ ವಿತರಣೆಯಲ್ಲಿಯೂ ಸಹ ಹಿನ್ನಡೆ ಉಂಟಾಗಿ ಹೆಚ್ಚು ಸಾಲ ವಿತರಣೆ ಮಾಡಲು ವರದಿ ಸಾಲಿನಲ್ಲಿ ಸಾಧ್ಯವಾಗಿರುವುದಿಲ್ಲ.

**2017–18ನೇ ಸಾಲಿನಲ್ಲಿ ಬ್ಯಾಂಕಿಂಗ್ ಕ್ಷೇತ್ರವು ಠೇವಣಿ ಸಂಗ್ರಹಣೆಯಲ್ಲಿ ಅಂದಾಜು ಸರಾಸರಿ ಶೇ.6.66 ಇದ್ದು, ಸಾಲ ಮುಂಗಡಗಳು ಶೇ.10.32 ಸಾಧಿಸಿರುವುದು ತಿಳಿದು ಬಂದಿರುತ್ತದೆ.** ಕಳೆದ ಸಾಲಿಗೆ ಹೋಲಿಸಿದಲ್ಲಿ ಇದು ಕಡಿಮೆ ಆಗಿರುತ್ತದೆ.

ಸಹಕಾರ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳಿಗೆ ಸರಿಸಮಾನವಾಗಿ ಕಾರ್ಯನಿರ್ವಹಿಸುತ್ತಿವೆ. ಎಟಿಎಂ ರುಪೇ ಕಾರ್ಡು, ವಿದೇಶಿ ವಿನಿಮಯ, ನೇರ ಹಣ ವರ್ಗಾವಣೆ, ಮೊಬೈಲ್ ಬ್ಯಾಂಕಿಂಗ್ ಮುಂತಾದ ಅನುಕೂಲಗಳನ್ನು ಸಹಕಾರ ಬ್ಯಾಂಕುಗಳು ನೀಡುತ್ತಿದ್ದರೂ ಸಹ ಇನ್ನೂ ಅನೇಕ ಸವಾಲುಗಳು ಮುಂದಿವೆ. ಸಣ್ಣ ಪ್ರಮಾಣ ಹಾಗೂ ಪಾವತಿ ಬ್ಯಾಂಕುಗಳ ಸ್ಥಾಪನೆ, ಖಾಸಗಿ ಹಣಕಾಸು ಸಂಸ್ಥೆಗಳ ಸಾಲ ವಿತರಣೆಯಲ್ಲಿ ಉದಾರ ನೀತಿ ಅನುಸರಿಸುತ್ತಿರುವುದು, ಕಡಿಮೆ ಬಡ್ಡಿದರದ ಆಮಿಷ ಒಡ್ಡಿ ಸಹಕಾರ ಬ್ಯಾಂಕುಗಳಲ್ಲಿ ಪಡೆದಿರುವ ಸಾಲಗಳನ್ನು ತಮ್ಮೆಡೆಗೆ ವರ್ಗಾಯಿಸಿಕೊಳ್ಳುವುದು ಇಂತಹ ಜ್ವಲಂತ ಸವಾಲುಗಳನ್ನು ಸಹಕಾರ ಬ್ಯಾಂಕುಗಳು ಎದುರಿಸುತ್ತಿವೆ. **ಇಂತಹ ಸವಾಲುಗಳ ನಡುವೆಯೂ ಸಹ ಸಹಕಾರ ಬ್ಯಾಂಕುಗಳು ಠೇವಣಿ ಸಂಗ್ರಹಣೆ, ಸಾಲ ಮುಂಗಡಗಳ ವಿತರಣೆ, ಸಾಲ ವಸೂಲಾತಿ ಇತ್ಯಾದಿ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವುದು ಶ್ಲಾಘನೀಯ.**

ನಿಮ್ಮ ಬ್ಯಾಂಕು ವರದಿ ಸಾಲಿನಲ್ಲಿ ಠೇವಣಿ ಸಂಗ್ರಹಣೆ ಹಾಗೂ ಸಾಲ ಮುಂಗಡಗಳನ್ನು ನಿರ್ವಹಿಸುವಲ್ಲಿ ಆರ್ಥಿಕ ಸದೃಢತೆಯ ಕಡೆಗೆ ಮುನ್ನಡೆದಿದೆ. **ನಿಮ್ಮ ಬ್ಯಾಂಕು ವರದಿ ಸಾಲಿನಲ್ಲಿ ರೂ. 140.77 ಕೋಟಿಗಳಷ್ಟು ಠೇವಣಿ ಸಂಗ್ರಹಿಸಿ ಅಂದರೆ ಶೇ. 7.49ರಷ್ಟು ಪ್ರಗತಿ ಸಾಧಿಸಿರುತ್ತದೆ. ಇದು ಸದಸ್ಯರು ಹಾಗೂ ಗ್ರಾಹಕರು ನೀಡಿರುವ ಸಹಕಾರದಿಂದ ಸಾಧ್ಯವಾಗಿರುತ್ತದೆ. ಹಾಗೆಯೇ ಸಾಲ ಮುಂಗಡಗಳ ವಿತರಣೆಯಲ್ಲಿ ನಿಮ್ಮ ಬ್ಯಾಂಕು ಶೇ.2.31ರಷ್ಟು ಪ್ರಗತಿ ಸಾಧಿಸಿರುತ್ತದೆ.**

**ಈ ದಿಸೆಯಲ್ಲಿ ಸಮರ್ಪಕ ಆಡಳಿತ ನಿರ್ವಹಣೆಯಾಗುತ್ತಿರುವ ಸಹಕಾರಿ ಬ್ಯಾಂಕುಗಳ ಪೈಕಿ ನಿಮ್ಮ ಬ್ಯಾಂಕೂ ಸಹ ಒಂದಾಗಿದ್ದು, ನಿಮ್ಮ ಬ್ಯಾಂಕು ಸದೃಢವಾಗಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಇದಕ್ಕೆ ಪೂರಕವಾಗಿ ಈ ವಾರ್ಷಿಕ ವರದಿ ತಮ್ಮ ಮುಂದೆ ಮಂಡಿಸಲಾಗಿದೆ.**

ಮಾನ್ಯ ಸದಸ್ಯರೇ, ತಮ್ಮ ಅವಶ್ಯಕತೆಗಳನ್ನು ನಿಮ್ಮ ಬ್ಯಾಂಕು ತಿಳಿದುಕೊಂಡು ಅದಕ್ಕೆ ಅನುಗುಣವಾಗಿ ತಮ್ಮ ಸಂಪೂರ್ಣ ಸಹಕಾರದೊಂದಿಗೆ 39 ವರ್ಷಗಳಿಂದ ತಮಗೆ ಸೇವೆಯನ್ನು ಸಲ್ಲಿಸುತ್ತಾ ಮುಂದುವರಿಯುತ್ತಿದ್ದೇವೆ. **ತಮ್ಮ ನಿರಂತರ ಪ್ರೋತ್ಸಾಹ, ಬೆಂಬಲದಿಂದ ಪರಸ್ಪರ ಪ್ರಗತಿಗೆ ಕಾರಣಕರ್ತರಾಗುತ್ತೀರೆಂಬ ದೃಢವಾದ ವಿಶ್ವಾಸ ನಮಗಿದೆ.**

## ಆರ್ಥಿಕ ಫಲಿತಾಂಶಗಳು :

**ವರದಿ ಸಾಲಿನಲ್ಲಿ ನಿವ್ವಳ ರೂ.140 ಕೋಟಿಗಳಿಗೂ ಮೀರಿ ಹೆಚ್ಚುವರಿ ಠೇವಣಿ ಸಂಗ್ರಹಣೆ ಮಾಡಿ ಒಟ್ಟು ನಿವ್ವಳ ರೂ.2021 ಕೋಟಿಗಳಷ್ಟು ಠೇವಣಿ ಸಂಗ್ರಹಣೆಯಾಗಿರುತ್ತದೆ.** ಬ್ಯಾಂಕಿನ ಒಟ್ಟು ವ್ಯವಹಾರದ ಮೊತ್ತವು ರೂ.3122 ಕೋಟಿಗಳಿಗೂ ಮೀರಿರುತ್ತದೆ. ಹಾಗೆಯೇ **ವರದಿ ಸಾಲಿನಲ್ಲಿ ನಿವ್ವಳ ರೂ.248 ಕೋಟಿಗಳಿಗೂ ಹೆಚ್ಚುವರಿ ಸಾಲ ಮುಂಗಡಗಳನ್ನು ವಿತರಿಸಲಾಗಿದ್ದು, ಒಟ್ಟು ಸಾಲ ಮುಂಗಡಗಳು ನಿವ್ವಳ ರೂ.1101 ಕೋಟಿಗಳಷ್ಟಾಗಿರುತ್ತದೆ** ಎಂದು ತಿಳಿಸಲು ಆಡಳಿತ ಮಂಡಲಿಯು ಹರ್ಷಿಸುತ್ತದೆ. **ವರದಿ ಸಾಲಿನಲ್ಲಿ ನಿಮ್ಮ ಬ್ಯಾಂಕು ಒಟ್ಟು ರೂ.25.16 ಕೋಟಿಗಳಷ್ಟು ಲಾಭಗಳಿಸಿರುತ್ತದೆ.**

## ಬ್ಯಾಂಕಿನ ಪ್ರಗತಿಯ ಪಕ್ಷಿನೋಟ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವಿವರ | 31.03.2016 | 31.03.2017 | 31.03.2018 | ಕಳೆದ ಸಾಲಿಗೆ ಹೋಲಿಸಿದಲ್ಲಿ ಪ್ರಗತಿ/ಸಾಧನೆ |
|---|---|---|---|---|---|
| 1. | ಸದಸ್ಯತ್ವ (ಸಂಖ್ಯೆಗಳಲ್ಲಿ) | 19,758 | 19,747 | **19,653** | **–94** |
| 2. | ಷೇರು ಬಂಡವಾಳ | 4,028 | 4,792 | **4,876** | **84** |
| 3. | ಆಪದ್ಧನ ನಿಧಿ | 2,279 | 2,589 | **2,893** | **304** |
| 4. | ಇತರೆ ನಿಧಿಗಳು | 7,364 | 8,737 | **9,689** | **952** |
| 5. | ಒಟ್ಟು ಲಾಭ | 3,249 | 3,439 | **2,516** | **–923** |
| 6. | ನಿವ್ವಳ ಲಾಭ | 1,167 | 1,206 | **1,017** | **–189** |
| 7. | ದುಡಿಯುವ ಬಂಡವಾಳ | 1,80,370 | 2,07,728 | **2,25,525** | **17,797** |
| 8. | ಠೇವಣಿಗಳು | 1,62,672 | 1,88,074 | **2,02,151** | **14,077** |
| 9. | ಸಾಲಗಳು | 97,398 | 1,07,704 | **1,10,186** | **2,482** |
| 10. | ಸುಸ್ತಿಸಾಲ | 3,674 | 5,834 | **9,376** | **3,542** |
| 11. | ಸುಸ್ತಿ ದರ | 3.77% | 5.42% | **8.51%** | **3.09%** |
| 12. | ಒಟ್ಟು ಅನುತ್ಪಾದಕ ಪ್ರಮಾಣ | 6.30% | 7.64% | **14.47%** | **6.83%** |
| 13. | ನಿವ್ವಳ ಅನುತ್ಪಾದಕ ಪ್ರಮಾಣ | 2.90% | 3.74% | **10.39%** | **6.65%** |

### ಷೇರು ಬಂಡವಾಳ :

ವರದಿ ಸಾಲಿನಲ್ಲಿ ಬ್ಯಾಂಕಿನ **ಷೇರು ಸಂಗ್ರಹಣೆಯು ರೂ.47.92 ಕೋಟಿಯಿಂದ ರೂ.48.76 ಕೋಟಿಗಳಿಗೆ ಏರಿಕೆಯಾಗಿರುತ್ತದೆ.** ಇದರಿಂದ 2016–17ನೇ ಸಾಲಿಗೆ ಹೋಲಿಸಿದಲ್ಲಿ ವರದಿ ಸಾಲಿನಲ್ಲಿ ರೂ.0.84 ಕೋಟಿ ಗಳಷ್ಟು ಹೆಚ್ಚಿನ ಷೇರು ಸಂಗ್ರಹಣೆಯಾಗಿರುತ್ತದೆ. **ಹಾಗೆಯೇ ಬ್ಯಾಂಕಿನ ನಿಧಿಗಳು ರೂ.113.26 ಕೋಟಿಗಳಿಂದ ರೂ.125.82 ಕೋಟಿಗಳಿಗೆ ಏರಿಕೆಯಾಗಿರುತ್ತದೆ.**

### ಹೆಚ್ಚುವರಿ ಹಣ ಮತ್ತು ಹೂಡಿಕೆಗಳು:

ವರದಿ ಸಾಲಿನಲ್ಲಿ **ಬ್ಯಾಂಕಿನ ಹೆಚ್ಚುವರಿ ಹಣವು ವರ್ಷಾರಂಭದಲ್ಲಿದ್ದ ರೂ.848.91 ಕೋಟಿಗಳಿಂದ ವರ್ಷಾಂತ್ಯಕ್ಕೆ ರೂ.944.61 ಕೋಟಿಗಳಿಗೆ ಏರಿಕೆಯಾಗಿರುತ್ತದೆ.** ಹೂಡಿಕೆಗಳ ಮೇಲಿನ ಬಡ್ಡಿ ಗಳಿಕೆಯು ಶೇ.7.52 ರಷ್ಟು ಆಗಿರುತ್ತದೆ. ಷೇರು ಮಾರುಕಟ್ಟೆಯ ಏರಿಳಿತಗಳನ್ನು ಪರಿಶೀಲಿಸಿ ಮತ್ತು ಸಕಾಲದಲ್ಲಿ ಸೂಕ್ತ ನಿರ್ಧಾರ ಗಳನ್ನು ತೆಗೆದುಕೊಂಡು ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿರುವ ಸಂಸ್ಥೆಗಳಲ್ಲಿ ವಿನಿಯೋಜಿಸಿದ್ದರಿಂದ ಹೂಡಿಕೆಗಳ ಮೇಲೆ ಉತ್ತಮ ಗಳಿಕೆಯನ್ನು (Yield on Investments) ಮಾಡಲಾಗಿದೆ. **ವರದಿ ಸಾಲಿನಲ್ಲಿ ಸಾಲ ಮತ್ತು ಠೇವಣಿ ಅನುಪಾತವು ಶೇ.54.50 ಆಗಿರುತ್ತದೆ.**

**ಶಾಖೆಗಳ ಸಾಧನೆ:**

ಶಾಖೆಗಳ ಸಾಧನೆಗಳಿಗೆ ಸಂಬಂಧಿಸಿದಂತೆ ಅಂಕಿ ಅಂಶಗಳ ವಿವರಗಳು ಈ ಕೆಳಕಂಡಂತಿರುತ್ತವೆ.

## ಠೇವಣಿಗಳು

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಶಾಖೆಗಳು | 2016–17 | 2017–18 | ಪ್ರಗತಿ |
|---|---|---|---|---|
| 1. | ಕುಮಾರ ಪಾರ್ಕ್ ಪಶ್ಚಿಮ ಶಾಖೆ | 11,970 | **12,934** | **964** |
| 2. | ಶಂಕರಮಠದರಸ್ತೆ ಶಾಖೆ | 46,746 | **50,208** | **3,462** |
| 3. | ರಾಜಾಜಿನಗರ ಶಾಖೆ | 28,908 | **30,733** | **1,825** |
| 4. | ಜೆ.ಪಿ ನಗರ ಶಾಖೆ | 20,138 | **20,551** | **413** |
| 5. | ಬನಶಂಕರಿ 3ನೇ ಹಂತ ಶಾಖೆ | 24,798 | **26,723** | **1,925** |
| 6. | ವಿಜಯನಗರ ಶಾಖೆ | 17,749 | **19,280** | **1,531** |
| 7. | ಕೆಂಗೇರಿ ಶಾಖೆ | 6,976 | **7,940** | **964** |
| 8. | ಮತ್ತೀಕೆರೆ ಶಾಖೆ | 8,681 | **9,454** | **773** |
| 9. | ಬಿ.ಟಿ.ಎಂ. ಶಾಖೆ | 8,840 | **9,685** | **845** |
| 10. | ರಾಜರಾಜೇಶ್ವರಿ ನಗರ ಶಾಖೆ | 6,910 | **7,770** | **860** |
| 11. | ಕೋಣನಕುಂಟೆ ಶಾಖೆ | 6,356 | **6,873** | **517** |

## ಸಾಲಗಳು ಮತ್ತು ಲಾಭ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಶಾಖೆಗಳು | ಸಾಲಗಳು | | | ಲಾಭ | |
|---|---|---|---|---|---|---|
| | | 2016–17 | 2017–18 | ಪ್ರಗತಿ | 2016–17 | 2017–18 |
| 1. | ಕುಮಾರಪಾರ್ಕ್ ಪಶ್ಚಿಮ ಶಾಖೆ | 5,259 | 6,543 | 1,284 | **–71.30** | **–90.04** |
| 2. | ಶಂಕರಮಠದ ರಸ್ತೆ ಶಾಖೆ | 37,222 | 37,557 | 335 | **1,413.33** | **1,234.76** |
| 3. | ರಾಜಾಜಿನಗರ ಶಾಖೆ | 11,960 | 12,423 | 463 | **264.27** | **336.71** |
| 4. | ಜೆ.ಪಿ. ನಗರ ಶಾಖೆ | 9,615 | 10,274 | 659 | **332.82** | **–196.03** |
| 5. | ಬನಶಂಕರಿ 3ನೇ ಹಂತ ಶಾಖೆ | 8,059 | 6,273 | –1,786 | **274.51** | **56.37** |
| 6. | ವಿಜಯನಗರ ಶಾಖೆ | 10,927 | 11,444 | 517 | **358.64** | **389.91** |
| 7. | ಕೆಂಗೇರಿ ಶಾಖೆ | 4,744 | 6,402 | 1,658 | **135.23** | **196.47** |
| 8. | ಮತ್ತೀಕೆರೆ ಶಾಖೆ | 4,123 | 3,016 | –1,107 | **4.86** | **62.83** |
| 9. | ಬಿ.ಟಿ.ಎಂ. ಶಾಖೆ | 7,377 | 5,695 | –1,682 | **214.57** | **245.35** |
| 10. | ರಾಜರಾಜೇಶ್ವರಿ ನಗರ ಶಾಖೆ | 4,926 | 6,894 | 1,968 | **128.30** | **253.05** |
| 11. | ಕೋಣನಕುಂಟೆ ಶಾಖೆ | 3,491 | 3,666 | 175 | **19.00** | **79.04** |

**2017-18ನೇ ಸಾಲಿನ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು 2018-19 ರಿಂದ 2020-21ನೇ ಸಾಲಿನವರೆಗೆ ಬ್ಯಾಂಕಿನ ದೀರ್ಘಕಾಲಿಕ ಯೋಜನೆಗಳ ಪಕ್ಷಿನೋಟ ಈ ಕೆಳಕಂಡಂತೆ ಮಾರ್ಪಾಡು ಮಾಡಲಾಗಿದೆ.**

(ರೂ.ಲಕ್ಷಗಳಲ್ಲಿ)

| ಕ್ರಸಂ | ವಿವರ | 2018-19 | 2019-20 | 2020-21 |
|---|---|---|---|---|
| 1. | ಠೇವಣಿಗಳು | **2,25,000** | 2,52,000 | 2,82,000 |
| 2. | ಸಾಲ ಮುಂಗಡಗಳು | **1,28,500** | 1,47,775 | 1,69,000 |
| 3. | **ಒಟ್ಟು ವಹಿವಾಟು** | **3,53,500** | **3,99,775** | **4,51,000** |
| 4. | ಸಿಡಿ ಅನುಪಾತ (ಶೇ.) | **57.11** | 59.00 | 60.00 |
| 5. | ಸಾಲಗಳ ಮೇಲಿನ ಬಡ್ಡಿ | **14,000** | 17,733 | 20,280 |
| 6. | ಠೇವಣಿಗಳ ಮೇಲಿನ ವೆಚ್ಚ (ಶೇ.) | **8.00** | 7.90 | 7.90 |
| 7. | ಸಾಲಗಳ ಮೇಲಿನ ಉತ್ಪನ್ನ (ಶೇ.) | **12.00** | 12.00 | 12.00 |
| 8. | ಒಟ್ಟು ಲಾಭ | **3,285** | 3,600 | 4,000 |
| 9. | ನಿವ್ವಳ ಲಾಭ | **1,500** | 2000 | 2,300 |
| 10. | ಒಟ್ಟು ಅನುತ್ಪಾದಕ ಆಸ್ತಿ (ಶೇ.) | **6.22** | 5 | 4.50 |
| 11. | ನಿವ್ವಳ ಅನುತ್ಪಾದಕ ಆಸ್ತಿ (ಶೇ.) | **3.50** | 2.75 | 2.25 |
| 12. | ಷೇರು ಬಂಡವಾಳ | **5,300** | 5,800 | 6,100 |
| 13. | ಸಿ.ಆರ್.ಎ.ಆರ್. (ಶೇ.) | **11.5** | 12 | 12.50 |

## ಉಪಸಮಿತಿಗಳ ಕಾರ್ಯವೈಖರಿ :

ಆಡಳಿತ ಮಂಡಲಿಯಿಂದ ಒಟ್ಟು ಎಂಟು ವಿವಿಧ ರೀತಿಯ ಉಪಸಮಿತಿಗಳನ್ನು ರಚಿಸಲ್ಪಟ್ಟಿದ್ದು, ಉಪಸಮಿತಿಗಳು ನಿಯತಕಾಲಿಕವಾಗಿ ಸಭೆಗಳನ್ನು ನಡೆಸಿ ಆಯಾ ಕ್ಷೇತ್ರಗಳಲ್ಲಿನ ಪ್ರಗತಿಯನ್ನು ಪರಿಶೀಲಿಸಿರುತ್ತದೆ. ಆಗಿಂದಾಗ್ಗೆ ಉಪಸಮಿತಿಗಳು ವಿವಿಧ ಕ್ಷೇತ್ರಗಳಲ್ಲಿನ ಗುರಿಗಳ ಸಾಧನೆಗೆ ಸೂಕ್ತ ಮಾರ್ಗದರ್ಶನ, ಕಾರ್ಯತಂತ್ರಗಳನ್ನು ರೂಪಿಸಿ ಸಹಕಾರ ನೀಡಿರುತ್ತವೆ. **ಉಪಸಮಿತಿಗಳು ಈ ಕೆಳಕಂಡಂತಿವೆ.**

## ಉಪಸಮಿತಿ-ಅಧ್ಯಕ್ಷರು :

| ಮಂಡಲಿ /ಸಮಿತಿ | ಉಪಸಮಿತಿಗಳ ಅಧ್ಯಕ್ಷರು |
|---|---|
| ಕೇಂದ್ರ ಸಾಲ ಸಮಿತಿ | ಶ್ರೀ ಕೆ.ಎನ್. ವೆಂಕಟನಾರಾಯಣ |
| ಸಿಬ್ಬಂದಿ ಸಮಿತಿ | ಶ್ರೀ ಕೆ.ಎನ್. ವೆಂಕಟನಾರಾಯಣ |
| ಕಟ್ಟಡ ಸಮಿತಿ | ಶ್ರೀ ಹೆಚ್.ಕೆ. ನಂಜುಂಡಸ್ವಾಮಿ |
| ಕಂಪ್ಯೂಟರ್/ಖರೀದಿ ಸಮಿತಿ | ಶ್ರೀ ಶಂಕರನಾರಾಯಣರಾವ್ |
| ಅನುತ್ಪಾದಕ ಆಸ್ತಿ ಮತ್ತು ವಸೂಲಾತಿ ಪರಿಶೀಲನಾ ಸಮಿತಿ | ಶ್ರೀ ಬಿ.ಎಸ್. ಶ್ರೀಪತಿರಾವ್ |
| ಲೆಕ್ಕಪತ್ರ, ಲೆಕ್ಕಪರಿಶೋಧನೆ ಮತ್ತು ವಿನಿಯೋಜನಾ ಸಮಿತಿ | ಶ್ರೀ ಶಂಕರನಾರಾಯಣರಾವ್ |

## ಉಪಸಮಿತಿಗಳ ಸದಸ್ಯರುಗಳು :

| ಆಡಳಿತ ಮಂಡಲಿ | ಎಲ್ಲಾ ನಿರ್ದೇಶಕರು |
|---|---|
| **ಉಪಸಮಿತಿಗಳು** | **ಉಪಸಮಿತಿಗಳ ಸದಸ್ಯರುಗಳು** |
| ಕೇಂದ್ರ ಸಾಲ ಸಮಿತಿ | ಶ್ರೀ ಶಂಕರನಾರಾಯಣರಾವ್, ಉಪಾಧ್ಯಕ್ಷರು,<br>ಶ್ರೀ ರಮಾನಂದ, ಶ್ರೀ ಹೆಚ್.ಆರ್. ಗೋಪಿನಾಥ್,<br>ಶ್ರೀ ಬಿ.ಎಸ್. ಶ್ರೀಪತಿರಾವ್, ಶ್ರೀ ಎಂ. ಅನಂತ್,<br>ಶ್ರೀ ಬಿ.ಎಸ್. ರವಿಶಂಕರ್, ಶ್ರೀ ಆರ್.ವಿ. ಕೃಷ್ಣಮೂರ್ತಿ.<br>ಶ್ರೀಮತಿ ನಳಿನಿ ಶಿವಶಂಕರ್, ಶ್ರೀಮತಿ ರೇಖಾ ಲಕ್ಷ್ಮಣ್ |
| ಸಿಬ್ಬಂದಿ ಸಮಿತಿ | ಶ್ರೀ ಶಂಕರನಾರಾಯಣರಾವ್, ಉಪಾಧ್ಯಕ್ಷರು,<br>ಶ್ರೀ ಹೆಚ್.ಕೆ. ನಂಜುಂಡಸ್ವಾಮಿ, ಶ್ರೀ ಹೆಚ್.ಆರ್. ಗೋಪಿನಾಥ್<br>ಶ್ರೀಮತಿ ನಳಿನಿ ಶಿವಶಂಕರ್, ಶ್ರೀಮತಿ ರೇಖಾ ಲಕ್ಷ್ಮಣ್ |
| ಕಟ್ಟಡ ಸಮಿತಿ | ಶ್ರೀ ಕೆ.ಎನ್. ವೆಂಕಟನಾರಾಯಣ, ಅಧ್ಯಕ್ಷರು<br>ಶ್ರೀ ಶಂಕರನಾರಾಯಣರಾವ್, ಉಪಾಧ್ಯಕ್ಷರು,<br>ಶ್ರೀ ಡಿ.ಎಸ್. ಹೊನ್ನಪ್ಪ, ಶ್ರೀ ಎಂ. ಅನಂತ್, |
| ಕಂಪ್ಯೂಟರ್/ಖರೀದಿ ಸಮಿತಿ | ಶ್ರೀ ಡಿ.ಎಸ್. ಹೊನ್ನಪ್ಪ, ಶ್ರೀ ಬಿ.ಎಸ್. ಗುರುರಾಜ್<br>ಶ್ರೀ ಎಂ.ಎಸ್. ವಿಜಯಕುಮಾರ್, ಶ್ರೀ ಟಿ. ಶ್ರೀನಿವಾಸರಾವ್. |
| ಅನುತ್ಪಾದಕ ಆಸ್ತಿ ಮತ್ತು<br>ವಸೂಲಾತಿ ಪರಿಶೀಲನಾ ಸಮಿತಿ | ಶ್ರೀ ರಮಾನಂದ,<br>ಶ್ರೀ ಎಂ.ಎಸ್. ವಿಜಯಕುಮಾರ್, ಶ್ರೀ ಎಸ್. ವೆಂಕಟೇಶಶಾಸ್ತ್ರಿ. |
| ಲೆಕ್ಕಪತ್ರ, ಲೆಕ್ಕಪರಿಶೋಧನೆ<br>ಮತ್ತು ವಿನಿಯೋಜನಾ ಸಮಿತಿ | ಶ್ರೀ ಬಿ.ಎಸ್. ರವಿಶಂಕರ್, ಶ್ರೀ ಟಿ. ಶ್ರೀನಿವಾಸರಾವ್,<br>ಶ್ರೀ ಆರ್.ವಿ. ಕೃಷ್ಣಮೂರ್ತಿ, ಶ್ರೀ ಎಸ್. ವೆಂಕಟೇಶಶಾಸ್ತ್ರಿ.<br>ಶ್ರೀ ಬಿ.ಎಸ್. ಗುರುರಾಜ್ |

ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿಯೂ ಐದು ಜನ ನಿರ್ದೇಶಕರನ್ನೊಳಗೊಂಡ ಶಾಖಾ ಸಮಿತಿಗಳು ಇದ್ದು, ಎಲ್ಲಾ ಶಾಖಾ ಸಮಿತಿಗಳಿಗೆ ಬ್ಯಾಂಕಿನ ಹಿರಿಯ ನಿರ್ದೇಶಕರುಗಳು ಶಾಖಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಆಯಾ ಶಾಖೆಗಳಲ್ಲಿ ಎರಡು ತಿಂಗಳಿಗೊಮ್ಮೆ ನಿಯಮಿತವಾಗಿ ಸಭೆಗಳನ್ನು ನಡೆಸಲಾಗಿದೆ. ಶಾಖೆಗಳ ಪ್ರಗತಿಯ ಬಗ್ಗೆ ಪರಿಶೀಲನೆ ನಡೆಸಿ, **ಶಾಖಾ ವ್ಯವಸ್ಥಾಪಕರುಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಶಾಖೆಗಳ ಪ್ರಗತಿಗೆ ಕಾರಣವಾಗಿರುತ್ತವೆ.**

| ಕ್ರ.ಸಂ. | ಸಮಿತಿಗಳು | ವರದಿ ಸಾಲಿನಲ್ಲಿ ನಡೆಸಿದ ಒಟ್ಟು ಸಭೆಗಳು |
|---|---|---|
| 1. | ಆಡಳಿತ ಮಂಡಳಿ ಸಭೆ | 13 |
| 2. | ಕೇಂದ್ರ ಸಾಲ ಸಮಿತಿ | 16 |
| 3. | ಲೆಕ್ಕಪತ್ರ, ಲೆಕ್ಕಪರಿಶೋಧನೆ ಮತ್ತು ವಿನಿಯೋಜನಾ ಸಮಿತಿ | 3 |
| 4. | ಕಂಪ್ಯೂಟರ್ / ಖರೀದಿ ಸಮಿತಿ | 02 |
| 5. | ಅನುತ್ಪಾದಕ ಆಸ್ತಿ ಪರಿಶೀಲನೆ ಮತ್ತು ವಸೂಲಾತಿ ಸಮಿತಿ | 4 |
| 6. | ಕಟ್ಟಡ ಸಮಿತಿ | 4 |
| 7. | ಸಿಬ್ಬಂದಿ ಸಮಿತಿ | 1 |
| 8. | **ಶಾಖಾ ಸಮಿತಿಗಳು :** **ವರದಿ ಸಾಲಿನಲ್ಲಿ ಪ್ರತಿ ಶಾಖೆಯಲ್ಲಿ 5 ಬಾರಿ ಶಾಖಾ ಸಮಿತಿ ಸಭೆಗಳನ್ನು ನಡೆಸಲಾಗಿದೆ.** | |

## ಅನುತ್ಪಾದಕ ಆಸ್ತಿ, ಸುಸ್ತಿ ಸಾಲ ಮತ್ತು ಸಾಲ ವಸೂಲಾತಿ ವಿವರಗಳು:

ಅನುತ್ಪಾದಕ ಆಸ್ತಿಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕಾರ್ಯ ಯೋಜನೆಗಳನ್ನು ರೂಪಿಸಿ ಅನುತ್ಪಾದಕ ಆಸ್ತಿ ಪರಿಶೀಲನೆ ಮತ್ತು ವಸೂಲಾತಿ ಸಮಿತಿ, ಶಾಖಾ ಸಮಿತಿಗಳ ಮಾರ್ಗದರ್ಶನದಲ್ಲಿ ಕಾರ್ಯಪ್ರವೃತ್ತರಾಗಿ ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು. **ಸುಸ್ತಿದಾರರನ್ನು ಸಂಪರ್ಕಿಸಿ ಅನುತ್ಪಾದಕ ಆಸ್ತಿಯ ಪರಿಣಾಮಗಳ ಬಗ್ಗೆ ಜಾಗೃತಿಯನ್ನು ಮೂಡಿಸಿ ಶೀಘ್ರ ಮರುಪಾವತಿಗೆ ತಾಕೀತು ಮಾಡಲಾಯಿತು.** ಇದಲ್ಲದೆ ಕೆಲವು ದೊಡ್ಡ ಮೊತ್ತದ ಸಾಲಗಳ ವಸೂಲಾತಿಗೆ ನಮ್ಮ ಸಿಬ್ಬಂದಿ ವರ್ಗದವರು ಸಾಮೂಹಿಕ ಸಾಲ ವಸೂಲಾತಿ ಕ್ರಮಗಳನ್ನು ಕೈಗೊಂಡಿರುತ್ತಾರೆ. ಈ ಸಂದರ್ಭದಲ್ಲಿ ಬಹುತೇಕ ಸುಸ್ತಿದಾರರು ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೊಳಿಸಿದ್ದರ ಪರಿಣಾಮವಾಗಿ ಅದರಲ್ಲೂ ರಿಯಲ್ ಎಸ್ಟೇಟ್ ಉದ್ಯಮ, ನಿರ್ಮಾಣ ಕಾಮಗಾರಿ ಇನ್ನೂ ಮುಂತಾದ ಉದ್ಯಮಗಳಲ್ಲಿ ಅವರ ವ್ಯಾಪಾರ ವಹಿವಾಟು ಕುಂಠಿತಗೊಂಡು ಮರುಪಾವತಿ ಮಾಡಲು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿರುತ್ತಾರೆ ಹಾಗೂ ಇಂದಿಗೂ ಸಹ ಅವರ ವ್ಯಾಪಾರ ವಹಿವಾಟಿನಲ್ಲಿ ಯಾವುದೇ ಚೇತರಿಕೆ ಕಂಡುಬಂದಿರುವುದಿಲ್ಲವೆಂದು ತಿಳಿಸಿದ್ದರಿಂದ ಸಾಲ ಮರುಪಾವತಿಯಲ್ಲಿ ಹಿನ್ನಡೆಯಾಗಿರುತ್ತದೆ.

**ಆದರೂ ಸಹ ಎಲ್ಲಾ ಸುಸ್ತಿದಾರರನ್ನು ನಿರಂತರವಾಗಿ ಸಂಪರ್ಕಿಸಿ ವಸೂಲಾತಿಯನ್ನು ಮಾಡುವಲ್ಲಿ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದೆ.** ಕೆಲವು ಸುಸ್ತಿದಾರರನ್ನು ಸಂಪರ್ಕಿಸಿದ ಸಂದರ್ಭದಲ್ಲಿ ಅವರಿಗೆ ವರಮಾನದಲ್ಲಿ ಹಿನ್ನಡೆ ಉಂಟಾಗಿರುವುದು, ಇತ್ಯಾದಿ ತೊಂದರೆಗಳನ್ನು ವ್ಯಕ್ತಪಡಿಸಿರುತ್ತಾರೆ. **ಕೆಲವು ಸುಸ್ತಿದಾರರನ್ನು ಸಭೆಗೆ ಕರೆಸಿ ಅವರಿಗೆ ಸಾಲ ಮರುಪಾವತಿಯ ವಿಳಂಬದಿಂದ ಆಗುತ್ತಿರುವ ಪರಿಣಾಮಗಳನ್ನು ವಿವರಿಸಿ ಶೀಘ್ರ ಮರುಪಾವತಿಸುವಂತೆ ವಿನಂತಿಸಲಾಯಿತು.** ಈ ಮೇಲ್ಕಂಡ ಕಾರಣಗಳಿಂದ ಕಳೆದ ಸಾಲಿಗಿಂತ ಅನುತ್ಪಾದಕ

ಆಸ್ತಿಯು ಸ್ವಲ್ಪ ಹೆಚ್ಚಾಗಿರುತ್ತದೆ. ನಮ್ಮ ಸಿಬ್ಬಂದಿ ವರ್ಗದವರು ಅವರವರ ಶಾಖೆಗೆ ಸಂಬಂಧಪಟ್ಟ ಸುಸ್ತಿದಾರರನ್ನು ಗಾಂಧಿ ತತ್ವದ ಮೂಲಕ ಫಲಕಗಳನ್ನು ಹಿಡಿದು ಸುಸ್ತಿದಾರರ ಮನೆಗಳ ಮುಂದೆ ಶಾಂತಿಯುತವಾಗಿ ಪ್ರತಿಭಟನೆ ನಡೆಸಿ ಸುಸ್ತಿದಾರರ ಮನವೊಲಿಸಲು ಪ್ರಯತ್ನಿಸುತ್ತಿದ್ದು, ಈ ನಿಟ್ಟಿನಲ್ಲಿ ಪರಿಣಾಮ ಬೀರುತ್ತಿದ್ದು, ವಸೂಲಾತಿ ಚುರುಕುಗೊಳ್ಳುತ್ತಿದೆ. ಇದಲ್ಲದೆ ಕೆಲವು ಸಾಲಗಾರರ ಮೇಲೆ ಈಗಾಗಲೇ ದಾವಾ ಕ್ರಮಗಳನ್ನು ಜರುಗಿಸಿದ್ದು, ಈ ಬಗ್ಗೆ ನಿರಂತರವಾಗಿ ನಿಗಾ ವಹಿಸಲಾಗುತ್ತಿದ್ದು, ಸೂಕ್ತ ಆದೇಶವನ್ನು ಪಡೆದು ಕ್ರಮ ಕೈಗೊಳ್ಳಲಾಗುವುದು. ಈ ಎಲ್ಲಾ ಕ್ರಮಗಳಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಅನುತ್ಪಾದಕ ಆಸ್ತಿಯನ್ನು ಕಡಿಮೆ ಮಾಡಲು ಆದ್ಯತೆ ನೀಡಲಾಗಿದೆ. **ಅದರಂತೆ ಅನುತ್ಪಾದಕ ಆಸ್ತಿಯನ್ನು ರೂ. 80.00 ಕೋಟಿಗಿಂತಲೂ ಕಡಿಮೆ ಮಾಡುವ ಗುರಿಯನ್ನು ಹೊಂದಲಾಗಿದ್ದು, ಅನುತ್ಪಾದಕ ಆಸ್ತಿಯನ್ನು ಕಡಿಮೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.**

## 2017-18ರಲ್ಲಿ ಅನುತ್ಪಾದಕ ಆಸ್ತಿಯ ವಿವರಗಳು :

| ಕ್ರ. ಸಂ | 2016-17 | | 2017-18 | | ಇಳಿಕೆ/ಏರಿಕೆ | |
|---|---|---|---|---|---|---|
| | ಒಟ್ಟು ಖಾತೆಗಳು | ಮೊಬಲಗು ರೂ. | ಒಟ್ಟು ಖಾತೆಗಳು | ಮೊಬಲಗು ರೂ. | ಒಟ್ಟು ಖಾತೆಗಳು | ಮೊಬಲಗು ರೂ. |
| 1. | **197** | **82,25,75,021.21** | **196** | **1,59,38,75,324.21** | **-01** | **77,13,00,302.90** |

## ಸುಸ್ತಿ ಸಾಲ ಖಾತೆಗಳ (ಅವಧಿಯಾನುಸಾರ) ವಿವರ ಹಾಗೂ ತೆಗೆದುಕೊಂಡಿರುವ ಕ್ರಮಗಳ ವಿವರ :

| ಕ್ರ. ಸಂ. | ವಿವರ | 2016-17 | | 2017-18 | | ಇಳಿಕೆ/ಏರಿಕೆ | |
|---|---|---|---|---|---|---|---|
| | | ಒಟ್ಟು ಖಾತೆಗಳು | ಮೊಬಲಗು ರೂ. | ಒಟ್ಟು ಖಾತೆಗಳು | ಮೊಬಲಗು ರೂ. | ಒಟ್ಟು ಖಾತೆಗಳು | ಮೊಬಲಗು ರೂ. |
| 1. | ಒಂದು ವರ್ಷದವರೆಗೆ | 576 | 22,87,14,720.00 | 453 | 26,64,41,400.70 | -123 | 3,77,26,680.70 |
| 2. | ಒಂದು ವರ್ಷದಿಂದ 2 ವರ್ಷದವರೆಗೆ | 28 | 2,10,05,096.00 | 36 | 1,77,56,578.00 | 8 | -32,48,518.00 |
| 3. | 2 ವರ್ಷದಿಂದ 3 ವರ್ಷದವರೆಗೆ | 08 | 31,68,643.00 | 10 | 31,63,531.00 | 2 | -5,112.00 |
| 4. | 3 ವರ್ಷ ಮತ್ತು ಮೇಲ್ಪಟ್ಟು | 05 | 35,84,892.00 | 9 | 51,76,650.00 | 4 | 15,91,758.00 |
| 5. | ನ್ಯಾಯಾಲಯದಲ್ಲಿ ದಾಖಲಾಗಿರುವ ಮೊಕದ್ದಮೆಗಳು | 22 | 24,16,20,959.00 | 36 | 45,11,72,018.00 | 14 | 20,95,51,059.00 |
| 6. | ಡಿಕ್ರಿ ಆದ ಹಾಗೂ ಅಮಲ್ಜಾರಿಗೆ ಒಳಪಡಬೇಕಾಗಿರುವ ಮೊಕದ್ದಮೆಗಳು | 07 | 64,01,172.00 | 6 | 77,48,829.00 | -1 | 13,47,657.00 |
| 7. | ಅಮಲ್ಜಾರಿಗೆ ಒಳಪಟ್ಟಿರುವುದು | 48 | 7,89,29,617.21 | 55 | 18,61,61,628.21 | 7 | 10,72,32,011.00 |
| | ಒಟ್ಟು | **694** | **58,34,25,099.21** | **605** | **93,76,20,634.91** | **-89** | **35,41,95,535.70** |

**ವರದಿ ಸಾಲಿನಲ್ಲಿ ಗ್ರಾಹಕರಿಗೆ ನೀಡುತ್ತಿರುವ ಹೊಸ ಸೌಲಭ್ಯಗಳು :**

1. ಕಳೆದ ಸಭೆಯಲ್ಲಿ ಸದಸ್ಯರು ಸೂಚಿಸಿದ್ದಂತೆ **ಮರಣೋತ್ತರ ಸಹಾಯ ನಿಧಿಯನ್ನು ರೂ.9,000/-ಗಳಿಂದ ರೂ.10,000/-ಗಳಿಗೆ ಹೆಚ್ಚಿಸಲಾಗಿದೆ.**
2. ವೈದ್ಯಕೀಯ ನೆರವಿನ ಮೊತ್ತವನ್ನು ವಿವಿಧ ರೀತಿಯ ಚಿಕಿತ್ಸೆಗಳ ಆಧಾರದ ಮೇಲೆ ರೂ.15,000/-ಗಳವರೆಗೆ ನೀಡಲಾಗುತ್ತಿದೆ.

**ಠೇವಣಿ ಮೇಲಿನ ವಿಮೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಬೇಕಾದ ವರದಿ :**

ವರದಿ ಸಾಲಿನಲ್ಲಿ ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕು ಮತ್ತು ಡಿ.ಐ.ಸಿ.ಜಿ.ಸಿ ಸಂಸ್ಥೆಗೆ ಸಕಾಲದಲ್ಲಿ ಅಗತ್ಯ ಮಾಹಿತಿಗಳನ್ನು ಸಲ್ಲಿಸಲಾಗಿರುತ್ತದೆ. **ಠೇವಣಿ ಭದ್ರತಾ ವಿಮಾ ಕಂತನ್ನು ದಿನಾಂಕ 29.05.2018 ರಂದು ಪಾವತಿಸಿದ್ದು, ವಿಮಾ ಪಾಲಿಸಿಯು ಚಾಲ್ತಿಯಲ್ಲಿರುತ್ತದೆ.**

**ವರದಿ ಸಾಲಿನಲ್ಲಿ ಸಿಆರ್‌ಎಆರ್ ಅನ್ನು ಶೇ.10.58 ರಷ್ಟನ್ನು ಕಾಯ್ದುಕೊಳ್ಳಲಾಗಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಕನಿಷ್ಠ ಶೇ.9ಕ್ಕಿಂತಲೂ ಹೆಚ್ಚಾಗಿರುತ್ತದೆ. ಬ್ಯಾಂಕಿನ ನಿವ್ವಳ ಮೌಲ್ಯವು (Networth) ದಿನಾಂಕ 31.03.2017ಕ್ಕೆ ಇದ್ದ ರೂ.136.61 ಕೋಟಿಗಳನ್ನು ದಿನಾಂಕ 31.03.2018ಕ್ಕೆ ರೂ.170.58 ಕೋಟಿಗಳಿಗೆ ಹೆಚ್ಚಾಗಿ ವರ್ಷದಿಂದ ವರ್ಷಕ್ಕೆ ಬ್ಯಾಂಕು ಸದೃಢತೆಯನ್ನು ಕಾಯ್ದುಕೊಂಡಿರುತ್ತದೆ.**

**ನೂತನ ಕಟ್ಟಡಗಳು:**

ಬನಶಂಕರಿ ಮೂರನೇ ಹಂತ (ಚನ್ನಮ್ಮಕೆರೆ ಅಚ್ಚುಕಟ್ಟು) ಮತ್ತು ರಾಜಾಜಿನಗರದಲ್ಲಿರುವ ಬ್ಯಾಂಕಿನ ನಿವೇಶನ ಗಳಲ್ಲಿ ಉದ್ದೇಶಿತ ಕಟ್ಟಡಗಳ ನಿರ್ಮಾಣವು ಪೂರ್ಣಗೊಂಡಿದ್ದು, ದಿನಾಂಕ 25.09.2017ರಿಂದ ಬನಶಂಕರಿ 3ನೇ ಹಂತ ಹಾಗೂ ದಿನಾಂಕ 13.11.2017ರಿಂದ ರಾಜಾಜಿನಗರ ಶಾಖೆಗಳು ಆಯಾ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. **ಈ ಸಂಬಂಧ ನಾವು ಹಿಂದಿನ ಕಟ್ಟಡಗಳಿಗೆ ನೀಡುತ್ತಿದ್ದ ಬಾಡಿಗೆ ಮೊತ್ತವು ಉಳಿತಾಯ ವಾಗಿರುತ್ತದೆ.**

**ಬನಶಂಕರಿ ಎರಡನೇ ಹಂತದಲ್ಲಿ ಉದ್ದೇಶಿತ ಪ್ರಧಾನ ಕಚೇರಿಯ ಕಟ್ಟಡ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ.** ಎರಡನೇ ಮಹಡಿ ನಿರ್ಮಾಣ ಕಾರ್ಯವು ಪೂರ್ಣಗೊಳ್ಳುತ್ತಿದ್ದು, ಮೇಲ್ಬಾವಣಿ ಹಾಕಲು ಅಗತ್ಯ ಸಿದ್ಧತೆಗಳು ನಡೆಯುತ್ತಿವೆ. ಮುಂದಿನ ವರ್ಷ ಆ ಕಟ್ಟಡದಲ್ಲಿ ಶಾಖೆ/ಕಛೇರಿಯನ್ನು ಕಾರ್ಯಾರಂಭಗೊಳಿಸಲು ಆಲೋಚಿಸಲಾಗಿದೆ.

**ಕೋರ್ ಬ್ಯಾಂಕಿಂಗ್ ತಂತ್ರಜ್ಞಾನ ಅಳವಡಿಕೆ/ಉನ್ನತೀಕರಣ:**

ಕೋರ್ ಬ್ಯಾಂಕಿಂಗ್ ತಂತ್ರಜ್ಞಾನದಡಿಯಲ್ಲಿ ಸದಸ್ಯರಿಗೆ ಇನ್ನೂ ತ್ವರಿತಗತಿಯಲ್ಲಿ ಸೇವೆ ಒದಗಿಸುವ ಸಲುವಾಗಿ **ಕೋರ್ ಬ್ಯಾಂಕಿಂಗ್ ತಂತ್ರಜ್ಞಾನವನ್ನು ಜಾಲಾಧಾರಿತ (Web Based) ಮಾಡಲಾಗಿದೆ.**

**ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆ:**

ಬ್ಯಾಂಕು ಆಂತರಿಕ ಲೆಕ್ಕಪರಿಶೋಧನೆಯ ಜೊತೆಗೆ ಹಿರಿಯ ಅಧಿಕಾರಿಗಳ ಮೂಲಕ ವಾರ್ಷಿಕ ಲೆಕ್ಕಪತ್ರಗಳ ಪರಿಶೀಲನೆ ನಡೆಸುತ್ತಿದ್ದು, **ಲೆಕ್ಕಗಳಲ್ಲಿ ಯಾವುದೇ ನ್ಯೂನತೆಗಳು ಕಂಡುಬರದ ಹಾಗೆ ನಿಗಾ ವಹಿಸಲಾಗಿದೆ.**

## ಸಿಬ್ಬಂದಿ ತರಬೇತಿ :

ವರದಿ ಸಾಲಿನಲ್ಲಿ ಬ್ಯಾಂಕಿನ ಎಲ್ಲಾ ಕ್ಷೇತ್ರಗಳ ಬಗ್ಗೆ ಸಿಬ್ಬಂದಿ ವರ್ಗದವರಿಗೆ ಆಂತರಿಕ ತರಬೇತಿ ನೀಡಲಾಗಿದೆ. ಈ ತರಬೇತಿಯು ಆರ್ಥಿಕ ವರ್ಷದಿಂದ ಪ್ರಾರಂಭಗೊಂಡು ನಿರಂತರವಾಗಿ ನಡೆಸಲಾಗಿದೆ. ಅಲ್ಲದೆ, **ಈ ಕೆಳಕಂಡ ಸಂಸ್ಥೆಗಳು ನಡೆಸಿದ ತರಬೇತಿ ಕಾರ್ಯಕ್ರಮಗಳಲ್ಲೂ ಸಹ ಭಾಗವಹಿಸಿರುತ್ತಾರೆ.**

| ಕ್ರ.ಸಂ. | ದಿನಾಂಕ | ಸ್ಥಳ |
|---|---|---|
| 1 | 31.05.2017 | ಭಾರತೀಯ ರಿಸರ್ವ್ ಬ್ಯಾಂಕು, ಬೆಂಗಳೂರು |
| 2 | 17.06.2017 | ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ |
| 3 | 18.08.2017 | ಭಾರತೀಯ ರಿಸರ್ವ್ ಬ್ಯಾಂಕು |
| 4 | 22.09.2017 | ಭಾರತೀಯ ರಿಸರ್ವ್ ಬ್ಯಾಂಕು |
| 5 | 27.10.2017 | ಭಾರತೀಯ ರಿಸರ್ವ್ ಬ್ಯಾಂಕು |
| 6 | 28.10.2017 | ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ |
| 7 | 07.03.2018 | ಭಾರತೀಯ ರಿಸರ್ವ್ ಬ್ಯಾಂಕು |

## ಸಿಬ್ಬಂದಿಯ ಪಾತ್ರ :

**ಬ್ಯಾಂಕಿನಲ್ಲಿ ಒಟ್ಟು 192 ಸಿಬ್ಬಂದಿಯಿದ್ದು, (ತಾತ್ಕಾಲಿಕ ಸಿಬ್ಬಂದಿ ಸೇರಿ) 2017-18ನೇ ಸಾಲಿನಲ್ಲಿ ಪ್ರತಿ ಸಿಬ್ಬಂದಿ ತಲಾ ವ್ಯವಹಾರವು ರೂ. 16.27 ಕೋಟಿಗಳಾಗಿರುತ್ತದೆ. 2016-17ನೇ ಸಾಲಿಗೆ ಹೋಲಿಸಿದಾಗ ಇದು ರೂ. 1.41 ಕೋಟಿಗಳಷ್ಟು ಹೆಚ್ಚಳವಾಗಿದೆ ಎಂಬುದನ್ನು ತಿಳಿಸಲು ಹರ್ಷಿಸುತ್ತೇವೆ. ಇದರಿಂದ ಸಿಬ್ಬಂದಿ ವರ್ಗದ ಕಾರ್ಯಕ್ಷಮತೆಯು ಹೆಚ್ಚಾಗಿರುವುದು ಕಂಡುಬಂದಿರುತ್ತದೆ.**

## ಬ್ಯಾಂಕಿನ ಸದಸ್ಯರು ಮತ್ತು ಅವರ ಮಕ್ಕಳ ಸಾಧನೆಗಾಗಿ ನೀಡಿರುವ ಪುರಸ್ಕಾರಗಳು.

ವರದಿ ಸಾಲಿನಲ್ಲಿ ಒಟ್ಟು 130 ಪ್ರತಿಭಾನ್ವಿತರನ್ನು ಈ ಸಮಾರಂಭದಲ್ಲಿ ಗೌರವಿಸಲಾಗಿದೆ. ಕಳೆದ ವರ್ಷ ಉನ್ನತ ವ್ಯಾಸಂಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿರುವ ಕೆಲವು ಸದಸ್ಯರ ಮಕ್ಕಳ ವಿವರಗಳನ್ನು ಈ ಕೆಳಕಂಡಂತೆ (ಮುಂದಿನ ಪುಟದಲ್ಲಿ) ಸಾಂಕೇತಿಕವಾಗಿ ನೀಡಲಾಗಿದೆ.

| ಕ್ರ. ಸಂ. | ಸದಸ್ಯರ ಹೆಸರು ಶ್ರೀಮತಿ/ಶ್ರೀ | ಸದಸ್ಯತ್ವ ಸಂಖ್ಯೆ | ಮಗ/ಮಗಳ ಹೆಸರು ಕು./ಚಿ. | ಪರೀಕ್ಷೆ/ಸಾಧನೆ | ಶೇ./ ರ್‍ಯಾಂಕ್ |
|---|---|---|---|---|---|
| 1 | ಬಿ.ಆರ್.ಶ್ರೀನಿವಾಸ್ | 22066 | ಪ್ರಣವ್ ಎಸ್.ಶಾಸ್ತ್ರಿ | ಎಸ್.ಎಸ್.ಎಲ್.ಸಿ. | 99.80 |
| 2 | ಎನ್.ರವಿ | 16649 | ಬಿ.ಆರ್.ರಕ್ಷಿತ್ | 10 (ಸಿ.ಬಿ.ಎಸ್.ಇ) | 10 ಪಾಯಿಂಟು |
| 3 | ಬಿ.ಎನ್.ಸುರೇಶ್‌ಕುಮಾರ್ | 18805 | ಸುಮುಖ ಎಸ್.ಶ್ರೀವತ್ಸ | 10 (ಐ.ಸಿ.ಎಸ್.ಇ) | 97.83 |
| 4 | ಎಸ್.ವೆಂಕಟೇಶ್ | 13099 | ವಿ.ಶ್ರೀಹರಿ | ದ್ವಿತೀಯ ಪಿ.ಯು.ಸಿ | 98.00 |
| 5 | ಡಿ.ಬಿ.ಆನಂದ್ | 16429 | ಎ.ಲಕ್ಷ್ಮಿ | ಬಿ.ಕಾಂ. | 93.20 |
| 6 | ಆರ್.ಶಂಕರ್ | 7191 | ಎಸ್. ನಾಗವಲ್ಲಿ | ಬಿ.ಎಸ್ಸಿ., | 91.80 |
| 7 | ವಿ.ಟಿ.ರಾಜು | 11536 | ವಿ.ಟಿ. ಆಕಾಶ್ | ಎಲ್.ಎಲ್.ಬಿ. | ಚಿನ್ನದ ಪದಕ |
| 8 | ಬಿ.ಸುಧಾಕರ್ | 12264 | ಬಿ. ಸೌಜನ್ಯ | ಬಿ.ಇ. (ವೈದ್ಯಕೀಯ ವಿದ್ಯುನ್ಮಾನ) | ಎರಡನೇ ರ್‍ಯಾಂಕ್ |
| 9 | ಎ.ಮೀನ | 21021 | ಆರ್. ನಿಖಿಲ್ | ವಿದ್ಯುನ್ಮಾನ ಮತ್ತು ಸಂಪರ್ಕ | 9.9 ಪಾಯಿಂಟು |
| 10 | ಪ್ರಭಾಕರ | 10017 | ಸ್ನೇಹ ಪಿ. ಶಾಸ್ತ್ರಿ | ಜೈವಿಕ ತಂತ್ರಜ್ಞಾನ | 9.5 ಪಾಯಿಂಟು |
| 11 | ಕೆ.ನಾಗೇಂದ್ರ | 7248 | ಕೆ.ಎನ್. ಪನ್ನಗ ದೇಸಾಯಿ | ಎಂ.ಡಿ (ರೇಡಿಯೊ ಡಯಾಗ್ನೊಸಿಸ್) | 2ನೇ ರ್‍ಯಾಂಕ್ |
| 12 | ಎಸ್.ಎನ್.ಹೊನ್ನಪ್ಪ | 8455 | ಹೆಚ್. ಸುಷ್ಮ | ಎಂ.ಟೆಕ್ | 86.20 |
| 13 | ಎನ್.ಸತ್ಯಪ್ರಕಾಶ್ | 21454 | ಬಿ.ಎಸ್. ಚಿರಂತ್ | ಎಂ.ಎಸ್., ಯುಎಸ್.ಎ | 4 ಸಿಜಿಪಿಎ |
| 14 | ಡಿ.ಎನ್.ವಿಶ್ವನಾಥ | 16542 | ರಶ್ಮಿ ವಿ. ಭಟ್ | ಕರ್ನಾಟಕ ಸಂಗೀತ (ಕಿರಿಯ) | 93.25 |
| 15 | ಪಿ.ಕೆ.ಉಮಾಲಕ್ಷ್ಮಿ | 7440 | ಎಸ್. ಕೀರ್ತನ | ಈಜು ಸ್ಪರ್ಧೆ – (ಚಿನ್ನದ ಪದಕ) | ಪ್ರಥಮ ಸ್ಥಾನ |
| 16 | ಕೆ.ಸಿ. ಪ್ರಕಾಶ್ | 6965 | – | ಮುದ್ರಣ ತಂತ್ರಜ್ಞಾನ | ಚಿನ್ನದ ಪದಕ |

ಪುರಸ್ಕೃತರಾದ ಎಲ್ಲಾ ಸದಸ್ಯರಿಗೆ ಮತ್ತು ಸದಸ್ಯರ ಮಕ್ಕಳಿಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

**ಶಾಸನಬದ್ಧ ಲೆಕ್ಕಪರಿಶೋಧನೆ:**

ವರದಿ ಸಾಲಿನಲ್ಲಿ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆ॥ ಎಎಸ್‌ಎಸ್‌ಪಿ ಅಂಡ್ ಕಂಪನಿ ಲೆಕ್ಕಪರಿಶೋಧನಾ ಸಂಸ್ಥೆಯವರು ನಡೆಸಿರುತ್ತಾರೆ. ಅವರು ನೀಡಿದ ಸಹಕಾರಕ್ಕಾಗಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಈ ಬಾರಿಯೂ ಶಾಸನಬದ್ಧ ಲೆಕ್ಕಪರಿಶೋಧನೆಯಲ್ಲಿ ನಿಮ್ಮ ಬ್ಯಾಂಕಿಗೆ 'ಎ' ಪ್ರವರ್ಗವನ್ನು ನೀಡಿರುತ್ತಾರೆ ಎಂದು ತಿಳಿಸಲು ಹರ್ಷಿಸುತ್ತೇವೆ.

## ಆಂತರಿಕ ಲೆಕ್ಕಪರಿಶೋಧನೆ:

ಬ್ಯಾಂಕಿನ ಆಂತರಿಕ ಲೆಕ್ಕಪರಿಶೋಧನೆಯನ್ನು **ಸನ್ನದ್ದು ಲೆಕ್ಕಪರಿಶೋಧಕರಾದ ಮೆ॥ ಜೆಎವಿ ಅಸೋಸಿಯೇಟ್ಸ್, ಮೆ॥ ಎಸ್.ವಿ.ಜಗದೀಶ್ ಅಂಡ್ ಕಂಪನಿ ಮತ್ತು ಮೆ॥ ನಾಥ್ ಅಸೋಸಿಯೇಟ್ಸ್ ಸಂಸ್ಥೆಯವರು ನಡೆಸುತ್ತಿದ್ದಾರೆ.** ವರದಿ ಸಾಲಿನಲ್ಲಿ ಪ್ರತಿ ಮಾಹೆ ಆಂತರಿಕ ಲೆಕ್ಕಪರಿಶೋಧನೆಯನ್ನು ಪ್ರಧಾನ ಕಛೇರಿ ಮತ್ತು ಎಲ್ಲಾ ಶಾಖೆಗಳಲ್ಲಿ ನಡೆಸಿರುತ್ತಾರೆ. **ಈ ಲೆಕ್ಕಪರಿಶೋಧನಾ ವರದಿಗೆ ಸಕಾಲದಲ್ಲಿ ಅನುಪಾಲನಾ ವರದಿಯನ್ನು ಸಲ್ಲಿಸಲಾಗಿದೆ. ಈ ಎಲ್ಲಾ ಲೆಕ್ಕಪರಿಶೋಧಕರಿಗೂ ಸಹ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.**

## ಕೃತಜ್ಞತೆಗಳು :

**ವರದಿ ಸಾಲಿನಲ್ಲಿ ಬ್ಯಾಂಕಿನ ಪ್ರಗತಿಗೆ ಸಹಕರಿಸಿದ ನಮ್ಮ ಎಲ್ಲಾ ಸದಸ್ಯರು, ಗ್ರಾಹಕರು ಹಾಗೂ ಉತ್ತಮ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕು, ಸಹಕಾರ ಇಲಾಖೆ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬ್ಯಾಂಕಿನ ಸಲಹೆಗಾರರು ಹಾಗೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಬ್ಯಾಂಕಿನ ಆಡಳಿತ ಮಂಡಲಿಯು ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಬ್ಯಾಂಕಿನ ಪ್ರಗತಿಗೆ ನಿರಂತರವಾಗಿ ಶ್ರಮಿಸಿ ಉತ್ತಮ ಮಾರ್ಗದರ್ಶನ ನೀಡುತ್ತಿರುವ ಆಡಳಿತ ಮಂಡಲಿಯ ಸದಸ್ಯರು ಹಾಗೂ ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿರುವ ನಮ್ಮ ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.**

ಆಡಳಿತ ಮಂಡಲಿ ಅಪ್ಪಣೆಯ ಮೇರೆಗೆ

**ಸಹಿ/-**

**ಟಿ.ಎಸ್. ಗುರುಪ್ರಸಾದ್**

ಮುಖ್ಯ ಕಾರ್ಯನಿರ್ವಹಣಾಧಿಕಾರಿ.

ಸ್ಥಳ : ಬೆಂಗಳೂರು

ದಿನಾಂಕ : 30-06-2018

## ಸೂಚನಾ ಪ್ರಕಟಣೆಯಲ್ಲಿನ ವಿಷಯಗಳ ಮೇಲಿನ ಟಿಪ್ಪಣಿ

ವಿಷಯ ಪಟ್ಟಿಯ ಕ್ರ. ಸಂಖ್ಯೆ

**ಸೂಚನಾ ಪ್ರಕಟಣೆಯಲ್ಲಿನ ವಿಷಯಗಳ ಮೇಲಿನ ಟಿಪ್ಪಣಿ :**

ವಿಷಯ 8

**2017–18ನೇ ಸಾಲಿನ ಆಯವ್ಯಯ ಅನುದಾನಗಳಲ್ಲಿನ ಹೆಚ್ಚುವರಿ ಖರ್ಚುಗಳಿದ್ದಲ್ಲಿ ಅಂಥ ಖರ್ಚುಗಳ ಅನುಮೋದನೆ ಮತ್ತು 2018–19ನೇ ಸಾಲಿನ ಆಯವ್ಯಯ ಅಂದಾಜುಗಳ ಮತ್ತು 2019–20ನೇ ಸಾಲಿನ ಆಯವ್ಯಯ (ತಾತ್ಕಾಲಿಕ) ಅಂದಾಜುಗಳ ಅನುಮೋದನೆ**

ವರದಿ ಸಾಲಿನಲ್ಲಿ ಈ ಕೆಳಕಂಡ ಖಾತೆಗಳಲ್ಲಿ ಆಯವ್ಯಯ ಅಂದಾಜಿಗಿಂತ ಹೆಚ್ಚುವರಿಯಾಗಿ ಖರ್ಚು ಆಗಿರುತ್ತದೆ.

| ಕ್ರ. ಸಂ. | ವಿವರ | 2017–18ನೇ ಸಾಲಿಗೆ ಅಂದಾಜು | 31.03.2018ಕ್ಕೆ ಆದ ಖರ್ಚು | ಹೆಚ್ಚುವರಿ ಖರ್ಚಿನ ಮೊತ್ತ | ಹೆಚ್ಚುವರಿ ಖರ್ಚಿಗೆ ಕಾರಣ |
|---|---|---|---|---|---|
| 1 | ಕಟ್ಟಡ ತೆರಿಗೆ ಮತ್ತು ಇತರೆ ತೆರಿಗೆಗಳು ಪಾವತಿಸಿದ್ದು | 3,50,000.00 | 5,31,000.00 | 1,81,000.00 | ಬನಶಂಕರಿ ಮತ್ತು ರಾಜಾಜಿನಗರ ನೂತನ ಕಟ್ಟಡಗಳ ನಿರ್ಮಾಣ ಪೂರ್ಣಗೊಂಡು ತೆರಿಗೆ ವ್ಯಾಪ್ತಿಗೆ ಒಳಪಟ್ಟಿದ್ದರಿಂದ |
| 2 | ಸವಕಳಿ ಖಾತೆ ವೆಚ್ಚ | 90,00,000.00 | 1,52,58,300.00 | 62,58,300.00 | ನೂತನ ಕಟ್ಟಡಗಳ ನಿರ್ಮಾಣ ಪೂರ್ಣಗೊಂಡು ಪೂರ್ಣ ವರ್ಷಕ್ಕೆ ಸವಕಳಿ ತೆಗೆದಿದ್ದರಿಂದ |
| 3 | ವಸೂಲಾತಿ ವೆಚ್ಚ | 55,00,000.00 | 65,17,000.00 | 10,17,000.00 | ದೊಡ್ಡ ಮೊತ್ತದ ಸುಸ್ತಿ ಸಾಲಗಳಿಗೆ ವಸೂಲಾತಿ ಕ್ರಮ ಕೈಗೊಂಡಿದ್ದರಿಂದ |
| 4 | ಪಂಚಾಯಿತಿ ಮತ್ತು ಅಮಲ್ಜಾರಿ ವೆಚ್ಚ | 7,00,000.00 | 13,17,000.00 | 6,17,000.00 | ದೊಡ್ಡ ಮೊತ್ತದ ಸುಸ್ತಿ ಸಾಲಗಳಿಗೆ ವಸೂಲಾತಿ ಕ್ರಮ ಕೈಗೊಳ್ಳಲು ದಾವೆ ಹೂಡಿದ್ದರಿಂದ ಮತ್ತು ದಾವೆ ವೆಚ್ಚವನ್ನು ಸಹಕಾರ ಇಲಾಖೆಗೆ ಪಾವತಿಸಿದ್ದರಿಂದ |
| 5 | ಸೇವಾ ಶುಲ್ಕ ಪಾವತಿಸಿದ್ದು/ ಜಿಎಸ್‌ಟಿ | 45,00,000.00 | 62,56,000.00 | 17,56,000.00 | ಸರಕು ಮತ್ತು ಸೇವಾ ತೆರಿಗೆ ಪದ್ಧತಿಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದರಿಂದ ಮತ್ತು ಜಿಎಸ್‌ಟಿ ದರವನ್ನು ಹೆಚ್ಚಳ ಮಾಡಿದ್ದರಿಂದ. |